Additional Subject:- Revenue Budget allotted to Fg. Group for FY. 2021-22.

ದೂರವಾಣಿ ಸಂಖ್ಯೆ: 080- 22211707
ಫ್ಯಾಕ್ಸ್ ಸಂಖ್ಯೆ : 080 22121982
ಇಮೇಲ್: cafkptcl@gmail.com
ಜಾಲತಾಣ: www.kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಸಂ:ಕವಿಪ್ರನಿನಿ/ಕೆಸಿಒ–32/29274/2021-22/ 7568

ನೊಂದಾಯಿತ ಕಂಪನಿಯ ಕಚೇರಿ,
ನಿಗಮ ಕಚೇರಿ,
ಕಾವೇರಿ ಭವನ, ಕೆ.ಜಿ.ರಸ್ತೆ
ಬೆಂಗಳೂರು 5600 09

ದಿನಾಂಕ : 25 MAR 2022

## ಸುತ್ತೋಲೆ

ವಿಷಯ: 2021-22ನೇ ಸಾಲಿಗೆ ಲೆಕ್ಕ ಗುಂಪು 74ಕ್ಕೆ ಹೆಚ್ಚುವರಿ ಕಂದಾಯ ಆಯವ್ಯಯ ಹಂಚಿಕೆ ಹಾಗು ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಪತ್ರ ಸಂಖ್ಯೆ: ಆಸ(ಲೆ ಮತ್ತು ಸಂ)/ನಿ(ಹ)/ಕೆ.ಸಿ.ಒ–32/ 29263–69/21-22/2144 ದಿನಾಂಕ:15.07.2021.

2. ಈ ಕಛೇರಿಯ ಪತ್ರ ಸಂಖ್ಯೆ: ಆಸ(ಲೆ ಮತ್ತು ಸಂ)/ನಿ(ಹ)/ಕೆ.ಸಿ.ಒ–32/ 29274/2021-22/5530 ದಿನಾಂಕ:17.12.2021.

3. ನಿರ್ದೇಶಕರು(ಪ್ರಸರಣ) ರವರ ಟಿಪ್ಪಣಿ ಸಂಖ್ಯೆ: /KPTCL/D(T)/EA1/ Note-1/2021-22 ದಿನಾಂಕ:19.02.2022

ಲೆ.ಸ(ಲೆಪ-1) B.S. 30/3/22

*****

ಮಾನ್ಯ ನಿರ್ದೇಶಕರು(ಪ್ರಸರಣ)ರವರ ಉಲ್ಲೇಖ(3)ರ ಟಿಪ್ಪಣಿಯಲ್ಲಿನ ಅನುಸಾರ ಹಾಗು ಈ ಕಛೇರಿಯ ಉಲ್ಲೇಖ (2)ರ ಪತ್ರಕ್ಕೆ ಮುಂದುವರೆದಂತೆ, 2021-22ನೇ ಸಾಲಿಗೆ ಈ ಕೆಳಕಂಡ ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳಿಗೆ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 74.1, 74.116 ಮತ್ತು 74.510ರ ಅಡಿ ಹೆಚ್ಚುವರಿಯಾಗಿ lumpsum ಕಂದಾಯ ಆಯವ್ಯಯವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

(ರೂ.ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಪ್ರಸರಣ ವಲಯದ ಹೆಸರು | ಲೆಕ್ಕ ಶೀರ್ಷಿಕೆ 74.1, 74.116 ಮತ್ತು 74.510ರ ಅಡಿ ಹಂಚಿಕೆ ಮಾಡಿರುವ ಹೆಚ್ಚುವರಿ ಕಂದಾಯ ಆಯವ್ಯಯ |
|---|---|---|
| 1 | ಬೆಂಗಳೂರು | 2.00 |
| 2 | ತುಮಕೂರು | 2.00 |
| 3 | ಕಲಬುರಗಿ | 2.00 |
| | ಒಟ್ಟು | **6.00** |

1. ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರು, ಈಗ ಹಂಚಿಕೆ ಮಾಡಿರುವ ಹೆಚ್ಚುವರಿ (lumpsum) ಕಂದಾಯ ಆಯವ್ಯಯದಲ್ಲಿ, ತುರ್ತು ಹಾಗು ಅಗತ್ಯ ಕಾಮಗಾರಿಗಳನ್ನು ಮಾತ್ರ ಗುರುತಿಸಿ, ಅಗತ್ಯ ಕಂದಾಯ ಆಯವ್ಯಯವನ್ನು ಟಿ.ಎಲ್ ಮತ್ತು ಎಸ್.ಎಸ್ ವಿಭಾಗಗಳಿಗೆ ಲೆಕ್ಕ

SE(IT)

ಶೀರ್ಷಿಕೆವಾರು ಮರು ಹಂಚಿಕೆ ಮಾಡುವುದು. ಅನುಮೋದಿತ ತುರ್ತು ಹಾಗು ಅಗತ್ಯ ಕಾಮಗಾರಿಯ ಹೆಸರು ಹಾಗು ಟಿ.ಎಲ್ ಮತ್ತು ಎಸ್.ಎಸ್ ವಿಭಾಗಗಳಿಗೆ ಲೆಕ್ಕ ಶೀರ್ಷಿಕೆವಾರು ಮರು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯ ವಿವರಗಳನ್ನು ತಪ್ಪದೇ ಈ ಕಛೇರಿಗೆ ಸಲ್ಲಿಸುವುದು.

2. ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳಿಗೆ ತುರ್ತು ಹಾಗು ಅವಶ್ಯ ಕಾಮಗಾರಿಗಳನ್ನು ಅನುಮೋದಿಸಲು ಹಾಗು ಕಂದಾಯ ಆಯವ್ಯಯವನ್ನು ಮರು ಹಂಚಿಕೆ ಮಾಡಲು ಮೇಲಿನ ಕಂಡಿಕೆ(1)ರ ಪ್ರಕಾರ ಅಧಿಕಾರ ನೀಡಿರುವ ಪ್ರಯುಕ್ತ, ಟಿ.ಎಲ್ ಮತ್ತು ಎಸ್.ಎಸ್ ವಿಭಾಗಾಧಿಕಾರಿಗಳು ತುರ್ತು ಹಾಗು ಅವಶ್ಯ ಕಾಮಗಾರಿಗಳನ್ನು ಕೈಗೊತ್ತಿಕೊಳ್ಳುವ ಮುಂಚೆ ವಲಯದ ಮುಖ್ಯ ಇಂಜಿನಿಯರ್(ವಿ) ರವರಿಂದ ಅನುಮೋದನೆ ಹಾಗು ಅಗತ್ಯ ಕಂದಾಯ ಆಯವ್ಯಯವನ್ನು ಮರು ಹಂಚಿಕೆ ಮಾಡಿಸಿ ಕೊಳ್ಳಲು ಸೂಚಿಸಲಾಗಿದೆ.
3. ಇನ್ನು ಮುಂದೆ ಟಿ.ಎಲ್ ಮತ್ತು ಎಸ್.ಎಸ್ ವಿಭಾಗಾಧಿಕಾರಿಗಳು ಹೆಚ್ಚಿನ ಕಂದಾಯ ಆಯವ್ಯಯಕ್ಕೆ ಸಂಬಂಧಿಸಿದಂತೆ ನೇರವಾಗಿ ಈ ಕಛೇರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.
4. ವಿಭಾಗದ ಲೆಕ್ಕಾಧಿಕಾರಿಗಳು ತುರ್ತು ಮತ್ತು ಅವಶ್ಯ ಕಾಮಗಾರಿಯ ಅಡಿ ದುರಸ್ತಿ ಮತ್ತು ನಿರ್ವಹಣೆಯ ಹುಂಡಿಗಳು/ ನಿಧಿ ಕೋರಿಕೆಯ ಪ್ರಸ್ತಾವನೆಗಳನ್ನು ಸಲ್ಲಿಸುವಾಗ, ತಪ್ಪದೇ ವಲಯದ ಮುಖ್ಯ ಇಂಜಿನಿಯರ್(ವಿ) ರವರಿಂದ ಅನುಮೋದಿಸಲ್ಪಟ್ಟ ಕಾಮಗಾರಿಯ ಹಾಗು ಮರು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯ ವಿವರಗಳ ಪತ್ರದ ಪ್ರತಿಯನ್ನು ಹಾಗು ಹುಂಡಿಯ/ ನಿಧಿ ಕೋರಿಕೆ ಪ್ರಸ್ತಾವನೆಯ ಮೇಲೆ ಸೂಕ್ತ ದೃಢೀಕರಣವನ್ನು ನಮೂದಿಸಿ ಈ ಕಛೇರಿಗೆ ಸಲ್ಲಿಸುವುದು.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರು<br>ರವರಿಂದ ಅನುಮೋದಿಸಲ್ಪಟ್ಟಿದೆ |

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)
ಕವಿಪ್ರನಿನಿ

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ತುಮಕೂರು/ಕಲಬುರಗಿ ಮಾಹಿತಿಗಾಗಿ ಹಾಗು ಅಗತ್ಯ ಕ್ರಮಕ್ಕಾಗಿ.
2. ಆರ್ಥಿಕ ಸಲಹೆಗಾರರು(ಆಂತರಿಕ ತನಿಖೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ,ಬೆಂಗಳೂರು/ತುಮಕೂರು/ಕಲಬುರಗಿ.
4. ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾ ಮತ್ತು ನಿ) ವೃತ್ತಗಳು, ಬೆಂಗಳೂರು/ತುಮಕೂರು/ಕಲಬುರಗಿ.
5. ಅಧೀಕ್ಷಕ ಇಂಜಿನಿಯರ್(ಐ.ಟಿ), ಕವಿಪ್ರನಿನಿ., ಜಾಲತಾಣದಲ್ಲಿ ಪ್ರಕಟಿಸಲು.
6. ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ(ಕಾ ಮತ್ತು ನಿ) ವೃತ್ತಗಳು, ಬೆಂಗಳೂರು/ತುಮಕೂರು/ಕಲಬುರಗಿ
7. ಉಪ ಲೆಕ್ಕನಿಯಂತ್ರಣಾಧಿಕಾರಿಗಳು (ಆಂತರಿಕ ತನಿಖೆ), ಪ್ರಸರಣ ವಲಯಗಳು, ಬೆಂಗಳೂರು/ತುಮಕೂರು/ಕಲಬುರಗಿ.
8. ಕಾರ್ಯನಿರ್ವಹಕ ಇಂಜಿನಿಯರ್(ವಿ), ಕವಿಪ್ರನಿನಿ, ಟಿ.ಎಲ್ ಮತ್ತು ಎಸ್.ಎಸ್/ ಬೃಹತ್ ಕಾಮಗಾರಿ ವಿಭಾಗಗಳು, ಬೆಂಗಳೂರು/ತುಮಕೂರು/ಕಲಬುರಗಿ ಪ್ರಸರಣ ವಲಯ ವ್ಯಾಪ್ತಿ.
9. ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಟಿ.ಎಲ್ ಮತ್ತು ಎಸ್.ಎಸ್/ ಬೃಹತ್ ಕಾಮಗಾರಿ ವಿಭಾಗಗಳು, ಬೆಂಗಳೂರು/ತುಮಕೂರು/ಕಲಬುರಗಿ ಪ್ರಸರಣ ವಲಯ ವ್ಯಾಪ್ತಿ.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ರವರ ಎಲ್ಲಾ ಹಿರಿಯ ಆಪ್ತಕಾರ್ಯದರ್ಶಿಗಳು.